ಮೆ : ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಬೀಳಗಿ ಇವರ ನ್ಯಾಯಾಲಯದಲ್ಲಿ

ಸಿ.ಸಿ.ನಂ.27/2024

CW-1 / PW-1

| | | |
|---|---|---|
| ಸಾಕ್ಷಿದಾರರ ಹೆಸರು | : | ಬಂದೇ ನವಾಜ್ ಮಲಗಾನ |
| ತಂದೆಯ  ಹೆಸರು | : | ಹುಸೇನ್ ಸಾಬ್ |
| ವಯಸ್ಸು | : | 38 |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಗೋಳಸಂಗಿ |

ದಿನಾಂಕ: **25-10-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ : ಎ.ಪಿ.ಪಿ. ಯವರಿಂದ.

ಚಾಸಾ-2 ರಿಂದ 6 ಪರಿಚಯವಿದೆ. ಆರೋಪಿತರ ಪರಿಚಯವಿದೆ. ಎರಡು ವರ್ಷಗಳ ಹಿಂದೆ 1 ನೇ ಆರೋಪಿತರಿಗೆ ಮತ್ತು ನಮಗೆ ಗಲಾಟೆ ಆಗಿರುತ್ತದೆ. ಚಾಸಾ-4 ಕೊಲ್ಲೂರಿನಲ್ಲಿ ವಾಸವಿರುತ್ತಾರೆ.  ಚಾಸಾ-4 ಮತ್ತು 1 ನೇ ಆರೋಪಿತನ ನಡುವೆ ಸ್ವಲ್ಪ ಜಗಳ ಇತ್ತು. ನಾನು ಗೋಳಸಂಗಿಯ ನಿವಾಸಿಯಾಗಿರುತ್ತೇನೆ. ನಾವು ಪಂಚರನ್ನು ಕೂಡಿಸಿ ಹೇಳಿ ಬರಬೇಕು ಎಂದು ಪಂಚರ ಜೊತೆಗೆ ಕೊಲ್ಲೂರಿಗೆ ಹೋಗಿದ್ದೆವು. ಊರ ಹಿರಿಯರು 1 ನೇ ಆರೋಪಿತನ ಮನೆಗೆ ಜನರನ್ನು ಕರೆಯಿಸಿ ಆತನನ್ನು ಬರುವಂತೆ ಹೇಳಿದರು ಆದರೆ ಆತ ಬರಲಿಲ್ಲ. ನಾವು ಅಲ್ಲೇ ಕುಳಿತಿದ್ದೆವು ಅಷ್ಟರಲ್ಲೇ ಜನರನ್ನು ಕರೆಯಿಸಿ ಹೊಡೆಯಲು ಬಂದಿದ್ದಾರೆ ಎಂದು 2 ನೇ ಆರೋಪಿತೆ 1 ನೇ ಆರೋಪಿತನಿಗೆ ಫೋನ್ ಮಾಡಿ ತಿಳಿಸಿದರು. ಅಷ್ಟರಲ್ಲೇ 1 ನೇ ಆರೋಪಿತ ಮನೆಗೆ ಬಂದು ಚಾಸಾ-4 ರವರನ್ನು ಹೊಡೆಯಲು ಪ್ರಾರಂಭಿಸಿದ. ನಾವು ಸ್ವಲ್ಪ ದೂರದಲ್ಲಿದ್ದೆವು ಆಕೆ ಚೀರಾಡಿದ ಶಬ್ದ ಕೇಳಿ ಚಾಸಾ-5, 6 ಮತ್ತು ನಾನು ಅಲ್ಲಿಗೆ  ಹೋಗಿ ಜಗಳ ಬಿಡಿಸಿದೆವು. 1 ನೇ ಆರೋಪಿತ ಸರಾಯಿ ಕುಡಿದಿದ್ದ. ನಮಗೂ ಹೊಡೆದ, ಚಾಸಾ-4 ರವರ ಸೀರೆ ಹಿಡಿದು ಎಳೆದಾಡಿದ. ಮತ್ತೆ ಓಡಿ ತನ್ನ ಮನೆಗೆ ಹೋಗಿ ಮಚ್ಚು ತೆಗೆದುಕೊಂಡು ಬಂದು ನನ್ನ ತಲೆಯ ಎಡಭಾಗಕ್ಕೆ ಮಚ್ಚಿನಿಂದ ಹೊಡೆದ. ನನ್ನ ತಂದೆಯ ಎಡಗೈ ಬೆರಳಿಗೆ ಪೆಟ್ಟಾಗಿರುತ್ತದೆ. ನನ್ನ ತಂದೆ ನನ್ನನ್ನು ಬೀಳಗಿ ಆಸ್ಪತ್ರೆಗೆ ಕರೆದುಕೊಂಡು ಬಂದು ಅಡ್ಮಿಟ್ ಮಾಡಿದರು. ಆ ಬಗ್ಗೆ ಎಂ.ಎಲ್.ಸಿ ಆಗಿರುತ್ತದೆ. ನಂತರ ನಾನು ದೂರು ನೀಡಿರುತ್ತೇನೆ.  ದೂರಿನಲ್ಲಿ ಇರುವ  ನನ್ನ ಸಹಿ ನೋಡಿ  ಗುರುತಿಸಿದೆನು. ಅದನ್ನು ನಿಪಿ-1 ಎಂದು,

ನನ್ನ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಪೋಲೀಸರು ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ ಮಚ್ಚನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಮಹಜರ್ ನಲ್ಲಿ ಇರುವ ನನ್ನ ಸಹಿ ನೋಡಿ ಗುರುತಿಸಿದೆನು. ಅದನ್ನು ನಿಪಿ-2 ಎಂದು, ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದು ಅಂತೆಯೇ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ವ.ಕೇ.ಸರಿ ಅದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಬೀಳಗಿ.